

ಎಂಬಂತಹ ಗಾದೆಗಳನ್ನೂ ಬರೆಯಲಾಗಿದೆ. ಜೊತೆಗೆ ಪರಿಸರ ಪ್ರಜ್ಞೆಯ ಪ್ರತೀಕವಾಗಿ ಹಸಿರು ಗಿಡಗಳ ಕುಂಡಗಳನ್ನೂ ಮೇಲ್ಭಾವಣಿಗೆ ನೇತಾಡಿಸಲಾಗಿದೆ.

ಇದೇ ರೀತಿ ಬಸ್ಸು ನಿಲ್ದಾಣದ ಒಳ ಗೋಡೆಗಳ ಮೇಲೂ ಕರ್ನಾಟಕದ ರಾಷ್ಟ್ರಕವಿಗಳು, ಕಲ್ಯಾಣ ಕರ್ನಾಟಕದ ಹಾಗೂ ಸ್ಥಳೀಯ ಪ್ರೇಕ್ಷಣೀಯ ಸ್ಥಳಗಳು, ಜೀವ ನದಿಗಳು, ಐತಿಹಾಸಿಕ ಹಾಗೂ ನಿಸರ್ಗ ರಮ್ಯ ತಾಣಗಳ ದೊಡ್ಡ ಗಾತ್ರದ ವಾಲ್ ಪೈಂಟಿಂಗ್ ರಚಿಸಲಾಗಿದೆ. ಇದು ಅಪರಿಚಿತ ಪ್ರವಾಸಿಗರಿಗೆ ಸೂಕ್ತ ಮಾರ್ಗದರ್ಶನ ನೀಡುವುದರೊಂದಿಗೆ ನಾಡಿನ ಸಾಹಿತ್ಯ ಸಾಧನೆಯ ಪರಿಚಯ ಮಾಡಿಸುತ್ತದೆ. ಉತ್ತರ ಕರ್ನಾಟಕದ ಗಡಿಭಾಗದ ಜಿಲ್ಲೆಯ ಸಾರಿಗೆ ಇಲಾಖೆಯ ಇಂತಹ ಕನ್ನಡ ಪರ ಮತ್ತು ಪರಿಸರ ಕಾಳಜಿ ಸ್ತುತ್ಯರ್ಹ. ಕನ್ನಡನಾಡಿನ ಸಾಹಿತ್ಯ, ಪ್ರವಾಸೋದ್ಯಮಗಳಂತಹ ಕ್ಷೇತ್ರಗಳಿಗೆ ಸಾರಿಗೆ ಇಲಾಖೆಯ ಈ ಕೊಡುಗೆ ಇತರ ಜಿಲ್ಲೆಗಳೂ ಅನುಕರಿಸುವಂತಿದ್ದು ಮಾದರಿಯೆನಿಸುತ್ತದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ





## ಹರಿವ ಹೊಳೆಯಲ್ಲಿ ಕರಗುತ್ತಿರುವ ಶಿಲ್ಪ

ಶಿಲ್ಪಕಲೆ ಎಂಬುದು ಭಾರತದ ಮಟ್ಟಿಗೆ ಚಿತ್ರಕಲೆಗಿಂತಲೂ ಹೆಚ್ಚು ಪುರಾತನ ಹಿನ್ನೆಲೆ ಹೊಂದಿದೆ. ಮಣ್ಣು, ಮರ, ಕಲ್ಲು, ಲೋಹ ಹೀಗೆ ಎಲ್ಲದರಲ್ಲೂ ಮೂರ್ತಿ ನಿರ್ಮಾಣಗೊಂಡಿವೆಯಾದರೂ ಶಿಲೆ ಮತ್ತು ಲೋಹದ ಶಿಲ್ಪಗಳು ಶಾಶ್ವತ ಸ್ಥಾನ ಪಡೆದಿವೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸಹಸ್ರಲಿಂಗದ ಹೊಳೆಯಲ್ಲಿ ಹೀಗೆ ನೀರಿನ ಹರಿವಿನಿಂದ ಕೊರೆಯುತ್ತಿರುವ ದೊಡ್ಡ ಬಂಡೆಯ ಬಸವ ಅನೇಕ ವರ್ಷಗಳಿಂದಲೂ ಹರಿಯುವ ಹೊಳೆಯಲ್ಲೇ ಇದ್ದಾನೆ. ಈ ಕಾರಣದಿಂದ ಮತ್ತು ಮಳೆಗಾಲದಲ್ಲಿ ರಭಸವಾಗಿ ಹರಿಯುವ ನೀರಿನ ಸೆಳೆತಕ್ಕೆ ಸಿಲುಕಿ ವರ್ಷದಿಂದ ವರ್ಷಕ್ಕೆ 'ಬಸವ' ಕರಗುತ್ತಿದೆ. ಇಲ್ಲಿನ ಬಂಡೆಗಳ ಮೇಲೆ ಕೆತ್ತಲಾದ ಭೀಮನ ಪಾದ, ಶಿವಲಿಂಗಗಳು, ಸಣ್ಣ ಗಾತ್ರದ ಬಸವನ ಮೂರ್ತಿಗಳೂ ಇದೇ ಅವಸ್ಥೆ ಅನುಭವಿಸುತ್ತಿವೆ. ಇವೆಲ್ಲವೂ ಈಗ ಶಿಲ್ಪಿಯೊಬ್ಬ ಅವಸರದಲ್ಲಿ ಕೆತ್ತಿಹೋದ ರಚನೆಯ ಹಾಗೇ ಕಾಣಲಾರಂಭಿಸಿವೆ. ಇದಕ್ಕೆ ಕಾರಣ ಶಿಲ್ಪ ಕರಗುತ್ತಿರುವುದು.

–ಅರ್ಚನಾ ಬೊಮ್ನಳ್ಳಿ, ಶಿರಸಿ

## ಹಾಸನದಲ್ಲೊಂದು ಕೃತಕ ಮರ

ಈಚೆಗೆ ಬಸ್ ಮೂಲಕ ಹಾಸನಕ್ಕೆ ಹೋಗುವಾಗ ಕೆಲವು ಪ್ರಯಾಣಿಕರು ಹಾಸನದ ಎನ್.ಆರ್. ಸರ್ಕಲ್ (ನರಸಿಂಹರಾಜ ವೃತ್ತ ರಾಜ್ಯ ಹೆದ್ದಾರಿ 71) ಬಳಿ ಇಳಿಯುತ್ತಿದ್ದಂತೆ. ವಿಶಾಲವಾದ ರಸ್ತೆಯ ಪಕ್ಕದಲ್ಲೊಂದು ಬೋಳು ಬೋಳಾದ ಮರ ಕಂಡಿತು. ಕಡಿದು ಹಾಕಲಾದ ಮರದ ಕೊಂಬೆಗಳಲ್ಲಿ ಅಲ್ಲೊಂದು ಇಲ್ಲೊಂದು ಹಸಿರು ಎಲೆ, ಮರದ ಸುತ್ತಲು ನಿರ್ಮಿಸಿದ ಕಟ್ಟೆ, ಅದರ ಮೇಲೆ ಒಬ್ಬರಿಗೊಬ್ಬರು ಕೈಕೈ ಹಿಡಿದು ಮರದ ಸುತ್ತಲೂ ನಿಂತಿರುವ ಪುತಾಣಿಗಳನ್ನು ಕಂಡು ಆಶ್ಚರ್ಯಗೊಂಡೆ. ಬಳಿಕ ಅದು ಕೃತಕವಾಗಿ ನಿರ್ಮಿಸಿದ ಮರ ಮತ್ತು ಪುಟಾಣಿಗಳ ಕಲಾಕೃತಿಗಳೆಂದು ಅರಿವಾಯಿತು. ಅಭಿವೃದ್ಧಿಯ ನೆಪದಲ್ಲಿ ಮರಗಳನ್ನು ಕಡಿಯುತ್ತಾ ಹೋದರೆ. ಮುಂದೊಂದಿನ ಇಂಥ ಕೃತಕ ಮರಗಳನ್ನು ಹೆಚ್ಚೆಚ್ಚು ನೋಡಬೇಕಾಗಬಹುದು.

–ರಘುನಾಥರಾವ್ ತಾಪ್ಸೆ, ದಾವಣಗೆರೆ

